be punished with imprisonment of either description for a term which may extend to two years, or with fine, or with both.

Then, I come to the Prevention of Destruction and Loss of Property Bill, 1981. The Clause-2 (b) of the said Bill reads thus.—

"2. Punishment for committing mischief in respect of property.—Whoever,—

(b) causes loss or damage to any property in any area during the period when an assembly of five or more persons in such area is prohibited by or under any law for the time being in force, or when such assembly is deemed as an unlawful assembly under section 141 of the Indian penal Code, 1860"

This is absent in the Indian Penal Code. Then, so far as the punishment is concerned, we have prescribed more deterrent punishment. We have enhanced the fine too. ನಾವು ಇದನ್ನು ತಂದಿರುವುದಕ್ಕೆ ಕಾರಣವೇನೆಂದರೆ ತಾವು ನನ್ನನ್ನು ಕೇಳಬಹುದು ? ಕಾರಣವೇನೆಂದರೆ ನಮ್ಮ ರಾಜ್ಯದಲ್ಲಿ ರೈತರ ಚಳುವಳಿ ಪ್ರಾರಂಭವಾದ ಮೇಲೆ ಇದುವರೆಗೂ ಡ್ಯಾಮೇಜ್ ಆದ ಮತ್ತು ಸುಟ್ಟಿರತಕ್ಕ ಬಸ್ಸುಗಳು ೨೦೦, ಇವತ್ತು ಒಂದು ಬಸ್ಸಿನ ಬೆಲೆ ೩ಲಕ್ಷ ರೂಪಾಯಿಗಳು, ೨೦೦ ಬಸ್ಸುಗಳ ಬೆಲೆ ಎಷ್ಟಾಗಬಹುದೆಂಬುದನ್ನು ತಾವೇ ಆಲೋಚನೆ ಮಾಡಿ.

ಅಷ್ಟೇ ಅಲ್ಲ ೨೦೦ ಬಸ್ಸುಗಳಲ್ಲಿ ಪ್ರಯಾಣ ಮಾಡತಕ್ಕಂಥಾ ಸೌಕರ್ಯ ಹೋಯಿತು; ಇದರಿಂದ ಜನಗಳಿಗೆ ಎಷ್ಟು ತೊಂದರೆಯಾಗಿದೆ ಅನ್ನುವುದನ್ನು ಯೋಚನೆ ಮಾಡಿ. ಅಲ್ಲದೆ ಅಷ್ಟು ಭಾಸಿಗಳನ್ನು ತರಿಸಬೇಕಾದರೆ ಎಷ್ಟು ವರ್ಷಗಳು ಬೇಕಾಗುತ್ತದೆ ಅನುವುದನ್ನೂ ಕೂಡ ಆಲೋಚನೆ ಮಾಡಿ ಇದು ಹಣದ ಪ್ರಶ್ನೆ ಒಂದೇ ಅಲ್ಲ, ಜನಗಳ ಸೌಕರ್ಯಕ್ಕೆ ಎಷ್ಟರ ಮಟ್ಟಿಗೆ ತೊಂದರೆ ಆಯಿತು ಅನ್ನುವುದನ್ನೂ ಸಹ ಯೋಚನೆ ಮಾಡಬೇಕಾಗಿದೆ. ಆದಕ್ಕೋಸ್ಕರವಾಗಿ ಉಗ್ರವಾದ ಶಿಕ್ಷೆ ಅಂತ ಇದರಲ್ಲಿ ಕೊಟ್ಟಿದ್ದೇವೆ. I hope my learned friend will agree with me.

SRI K. BHASKAR NAIDU.—Do you mean that this has been brought only after the 'Ryots Chaluvali' to put down the royts ?

ಶ್ರೀ ವೈ. ರಾಮಕೃಷ್ಣ.—ಹಾಗೇನೂ ಇಲ್ಲ. ಅದಕ್ಕೋಸ್ಕರವಾಗಿಯೇ ನಾನು ಆಂದಿನಿಂದ ಇಂದಿನವರೆಗೂ ಎಂದು ಹೇಳಿದನೇ ಹೊರತು ಬೇರೇನೂ ಅಲ್ಲ. ಜೊತೆಗೆ ಮತ್ತೊಂದು ವಿಚಾರ ಏನೆಂದರೆ ಇದರಲ್ಲಿ ಏನು ತತ್ವ ಇದೆ ಅನ್ನುವುದನ್ನು ಎತ್ತಿದ್ದಾರೆ. ನಮ್ಮ ಸಿವಿಲ್ ರೈಟ್ಸಿಗೂ ಮತ್ತು ಈಗ ತಂದಿರುವುದಕ್ಕೂ ನೋಡಿದರೆ ತಾಳೆ ಮಾಡಿ ನೋಡಿದರೆ ಏನೂ ಇಲ್ಲವಲ್ಲಾ ಅಂತ ಹೇಳಿದ್ದಾರೆ. ಈಪೊತ್ತು ಸಿವಿಲ್ ರೈಟ್ಸ್ ಆಕ್ಟ್ ಪ್ರಕಾರ ಏನಾದರೂ ನ್ಯಾಯ ಪಡೆಯಬೇಕಾದರೆ ಅವನಿಗೆ ಯಾವುದಾದರೂ ಒಂದು ಕುಮ್ಮಕ್ಕು ಹಿಂದೆ ಇದ್ದೇ ಇರುತ್ತದೆ. ಕುಮ್ಮಕ್ಕು ಇಲ್ಲದೆ ಅವನು ಯಾವ ರೀತಿಯಾಗಿಯೂ ಅಪರಾಧ ಮಾಡುವುದಕ್ಕಾಗುವುದಿಲ್ಲ. ಯಾರಾದರೂ ದೊಡ್ಡವರ ಕುಮ್ಮಕ್ಕು ಇರುತ್ತದೆ ಇಲ್ಲವೇ ಯಾವುದಾದರೂ ಸೊಸೈಟಿಯ ಜನರ ಕುಮ್ಮಕ್ಕು ಇದ್ದೇ ಇರುತ್ತದೆ. ಯಾರಾದರೂ ತಪ್ಪ ಭಾಸ್‌ಗಿರಿ ತಟ್ಟಿದ್ದರೆ ಸಾಕು, ಸರಿ ಎಂದರೆ ಸಾಕು, ಆ ಕೆಲಸ ಮಾಡಿಬಿಡುತ್ತಾರೆ. ಇಲ್ಲದೇ ಹೋದರೆ ಅದನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಾರೆ. The same analogy holds good here also. We have incorporated punitive clause in this Bill. As the Hon'ble Member Sri C. M. Arumugnam has said, when a person has committed two offence, he is definitely liable for punishment for

two independent offence. ಮತ್ತೊಂದು ವಿಚಾರ ಏನೆಂದರೆ ಇದರಲ್ಲಿ ಪ್ಯೂನಿಟೀವ್ ಟ್ಯಾಕ್ಸ್ ಮಾತ್ರ ಹಾಕಿದ್ದೇವೆ ವಿನಾ ಆರ್ಬಿಟ್ರರಿಯಾಗಿ ಏನೂ ಹಾಕುವುದಕ್ಕೆ ಹೋಗಿಲ್ಲ. ತಮಗೆ ಹೇಳಬೇಕಾದರೆ ಇದರ ಬಗ್ಗೆ ರೂಲ್ಸ್ ಒಂದನ್ನು ಫ್ರೇಮ್ ಮಾಡುತ್ತಿದ್ದೇವೆ. ಮಾಡಿದ ನಂತರ ರೂಲ್ ಕಾಪಿಯೊಂದನ್ನು ಈ ಸಭೆಯ ಮುಂದೆ ಇಡುತ್ತೇನೆ. ಇದರ ಬಗ್ಗೆ ನಾವು ಕಾನೂನು ಬದ್ಧವಾಗಿ ಹೋಗಿದ್ದೇವೆ ವಿನಾ ಬೇರೆ ಯಾವರೀತಿಯಾಗಿಯೂ ಹೋಗಿಲ್ಲ. ಇದರಲ್ಲಿ ಏನಾದರೂ ತಪ್ಪು ಇದೆ ಎಂದು ಕಂಡು ಬಂದರೆ ಅವರು ಸರ್ಕಾರಕ್ಕೆ ಅರ್ಜಿ ಬರೆದುಕೊಳ್ಳಬಹುದು. ಅದಕ್ಕೂ ಕೂಡ ಇದರಲ್ಲಿ ಪ್ರಾವಿಷನ್ ಮಾಡಿದ್ದೇವೆ. ಈಗ ತಂದಿರುವ ಆಕ್ಟ್‌ನಲ್ಲಿ ನಾವು ಯಾವುದನ್ನೂ ಕೂಡ ಅಷ್ಟು ಆರ್ಬಿಟ್ರರಿಯಾಗಿ ಮಾಡುವುದಕ್ಕೆ ಹೋಗಿಲ್ಲ. Stake is heavy. ಆ ಸಂದರ್ಭ ಈಗ ಒದಗಿ ಬಂದಿರುವುದರಿಂದ ಈ ಒಂದು ಬಿಲ್ಲನ್ನು ತಂದಿದ್ದೇವೆ ವಿನಾ ಬೇರೆ ಇನ್ನಾವ ಉದ್ದೇಶವೂ ಇದರಲ್ಲಿ ಇಲ್ಲ. ವಾಸ್ತವವಾಗಿ ನಾವು ಇದರ ಬಗ್ಗೆ ಆಲೋಚನೆ ಮಾಡುವುದಾದರೆ ಇದರಿಂದ ಸರ್ಕಾರಕ್ಕೆ ಎಷ್ಟು ಹಣ ನಷ್ಟವಾಗುತ್ತದೆ ನೋಡಿ, ಸರ್ಕಾರದ ಬಸ್ಸುಗಳಿಗೆ ಎಷ್ಟು ನಷ್ಟವಾಗುತ್ತದೆ ನೋಡಿ ಅಲ್ಲದೆ ಸಾರ್ವಜನಿಕರಿಗೆ ಇದರಿಂದ ತೊಂದರೆ ಎಷ್ಟಾಗುತ್ತದೆ ಅನ್ನುವುದನ್ನು ನೋಡಿ, ಅದನ್ನು ತಪ್ಪಿಸುವ ಉದ್ದೇಶದಿಂದಲೇ ಈ ಬಿಲ್ಲನ್ನು ನಾವು ತಂದಿದ್ದೇವೆ; ಬೇರೆ ಇನ್ನಾವ ಉದ್ದೇಶವೂ ಇಲ್ಲ ಅನ್ನುವ ಭರವಸೆಯನ್ನು ನಾನು ಕೊಡುತ್ತೇನೆ. ಅಷ್ಟೇ ಅಲ್ಲ ಇದನ್ನೂ ದುರುಪಯೋಗ ಪಡಿಸುವುದಕ್ಕೆ ಸರ್ಕಾರ ಯಾವತ್ತೂ ಹೋಗುವುದಿಲ್ಲ ಅನ್ನುವ ಆಸ್ವಾಸನೆಯನ್ನೂ ಕೂಡ ಕೊಡುತ್ತೇನೆ. ಈ ಬಗ್ಗೆ ಒಂದು ಜಂಡಿಷಿಯನ್ ವೇನಲ್ಲಿ ಹೋಗುತ್ತಿದ್ದೇವೆ. ಮುಂದೆಆಗತಕ್ಕಂಥಾ ತೊಂದರೆಗಳನ್ನು ತಡೆಹಿಡಿಯುವುದಕ್ಕೆ ಈ ಒಂದು ಮಸೂದೆಯನ್ನು ತೆಗೆದು ಕೊಂಡು ಬಂದಿದ್ದೇವೆ. ಇದಕ್ಕೆ ತಾವೆಲ್ಲರೂ ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ಈ ಬಗ್ಗೆ ಏನು ಉತ್ತರ ಕೊಟ್ಟರು ಅದರ ಬಗ್ಗೆ ಸ್ವಲ್ಪ ಸಂಶಯ ಬಂದಿದ್ದಕ್ಕೆ, ಆ ಸಂಶಯವನ್ನು ಪರಿಹಾರ ಮಾಡಿಕೊಳ್ಳಲು ನಾನು ಎದ್ದು ನಿಂತಿದ್ದೇನೆ. ಇದರಲ್ಲಿ ಎರಡನೇ ಕಲಂ ನೋಡಿದರೆ ಗೆದತ್ತಾಗುತ್ತದೆ. ಅದು ಈ ರೀತಿ ಇದೆ:—

2. Punishment for committing mischief in respect of property : Whoever,—

a) commits or attempts to comit, or instigates, incites or other wise abets the commission of mischief within the meaning of section 425 of the Indin Penal Code, 1860 (Central Act 45 of 1860) and causesloss or damage to any property; or

b) causes loss or damage to any property in any area during the period when an assembly of five or more persons in such area is prohibited by or under any law for the time being in force, or when such assembly is deemed as an unlawful assembly under section 141 of the Indian Penal Code, 1860 (Central Act 45 of 1860)''.....

ಇದರಲ್ಲಿ ಏನಾಗುತ್ತದೆ ಎಂದರೆ ಯಾವಾನಾದರೂ ತಪ್ಪು ಮಾಡುತ್ತಾನೆಂದು ಇಟ್ಟು ಕೊಳ್ಳೋಣ; ಯಾವನಾದರೂ ಒಂದು ಅಪರಾಧ ಮಾಡುತ್ತಾನೆಂದು ಇಟ್ಟು ಕೊಳ್ಳೋಣ. ಆ ಬಗ್ಗೆ ಇನ್‌ಫರ್ಮೇಷನ್ ಕೊಡುವವರು ಯಾರು ಅವನನ್ನು ಅರೆಸ್ಟ್ ಮಾಡುವವರು ಯಾರು ಅನ್ನುವ ಪ್ರಶ್ನೆ ಬರುತ್ತದೆ. ೪೨೫ನೇ ಸೆಕ್ಷನ್ ಪ್ರಕಾರ ಮತ್ತು ೧೪೧ ನೇ ಸೆಕ್ಷನ್ ಪ್ರಕಾರ ಏನು ಇದೆ ಅದು ಈ ಕಾಗ್ನಿಸಬಲ್ ಆಫೆನ್ಸ್‌ಗೆ ಬರುವುದಿಲ್ಲ.ಹಾಗೆ ಅದು ಬರುವುದಿಲ್ಲ ಅಂದ ಮೇಲೆ ಇದರ ಬಗ್ಗೆ ಕಂಪ್ಲೇಂಟ್ ಕೊಡುವವರು ಯಾರು ? ಪೋಲೀಸಿನವರು ಕಂಪ್ಲೇಂಟ್ ಕೊಡ ಬೇಕು ಇಲ್ಲವೇ ಪಬ್ಲಿಕ್‌ನವರು ಕಂಪ್ಲೇಂಟ್ ಕೊಡಬೇಕು. ಇವರಿಬ್ಬರಲ್ಲಿ ಯಾರಾದರೂ ಮಾಡಬೇಕು ಅನ್ನುವುದನ್ನು ಈ ಆಕ್ಟ್‌ನಲ್ಲಿ ಮಾಡಬೇಕು. ಇಲ್ಲದೇ